
# ಭಾರತೀಯ ಆಡಳಿತ

ಆರ್. ಶ್ರೀನಿವಾಸ
ಎಂ.ಎ., ಎಂಫಿಲ್



Scanned with CamScanner

# ಭಾರತೀಯ ಆಡಳಿತದಲ್ಲಿ ಪ್ರಮುಖ ಸಮಸ್ಯೆ(ವಿಚಾರ)ಗಳು.

## "ರಾಜಕೀಯ ಕಾರ್ಯಾಂಗ (ಮಂತ್ರಿಗಳು) ಹಾಗೂ ಶಾಶ್ವತ ಕಾರ್ಯಾಂಗ (ನಾಗರಿಕ ಸೇವಾವರ್ಗ)ದ ಸಂಬಂಧ"

## (Relationship between Political and permanent executive)

ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮಂತ್ರಿ ಮಂಡಲವು ನೈಜ್ಯ ಕಾರ್ಯಾಂಗವಾಗಿ ಕಾರ್ಯನಿರ್ವಹಿಸುತ್ತದೆ. ಮಂತ್ರಿಯು ತನಗೆ ವಹಿಸಿದ ಖಾತೆಯ ಅಥವಾ ಇಲಾಖೆಯ ರಾಜಕೀಯ ಮುಖ್ಯಸ್ಥನಾಗಿರುತ್ತಾನೆ. ಇಲಾಖೆಯ ಸಮಸ್ತ ಹೊಣೆಗಾರಿಕೆಯು ಮಂತ್ರಿಗೆ ಸಂಬಂಧಿಸಿರುತ್ತದೆ. ತನ್ನ ಇಲಾಖೆಯ ಎಲ್ಲಾ ವಿಧವಾದ ಕೆಲಸಕಾರ್ಯಗಳಿಗೂ ಈ ಮಂತ್ರಿಯೇ ಉತ್ತರದಾಯಿಯಾಗಿದ್ದಾನೆ. ತನ್ನ ಇಲಾಖೆಗೆ ಅಥವಾ ಖಾತೆಗೆ ಸಂಬಂಧಿಸಿದ ನೀತಿ ನಿರೂಪಣೆಯನ್ನು ಮಂತ್ರಿಯೇ ಮಾಡಬೇಕಾಗುತ್ತದೆ. ಈತನಿಗೆ ಆಡಳಿತಾತ್ಮಕವಾಗಿ ಸಹಾಯ ಮತ್ತು ಸಲಹೆ ನೀಡಲು ನಾಗರಿಕ ಸೇವಾವರ್ಗ (ನೌಕರಶಾಹಿವರ್ಗ)ವಿರುತ್ತದೆ (ಸಾಮಾನ್ಯವಾಗಿ ಕಾರ್ಯದರ್ಶಿ). ಈ ಅಧಿಕಾರಿಯು ಮಂತ್ರಿಯ ಆದೇಶಕ್ಕೆ ಬದ್ಧವಾಗಿ ಕಾರ್ಯನಿರ್ವಹಿಸುತ್ತಾನೆ. ನೀತಿ ನಿರೂಪಣೆಯು ಮಂತ್ರಿಯ ಕೆಲಸವಾದರೆ ಅವುಗಳ ಅನುಷ್ಠಾನ ಇಲಾಖೆಯ ಆಡಳಿತಾತ್ಮಕ ಮುಖ್ಯಸ್ಥನಾದ ಕಾರ್ಯದರ್ಶಿಯ ಕೆಲಸವಾಗಿದೆ. ಈ ನಿಟ್ಟಿನಲ್ಲಿ ರಾಜಕೀಯ ಕಾರ್ಯಾಂಗವಾದ ಮಂತ್ರಿ ಮತ್ತು ಶಾಶ್ವತ ಕಾರ್ಯಾಂಗವಾದ ಕಾರ್ಯದರ್ಶಿಯ ನಡುವಿನ ಸಂಬಂಧವು ಆಡಳಿತಾತ್ಮಕ

Scanned with CamScanner

| ಮಂತ್ರಿಗಳು | ನೌಕರಶಾಯಿವರ್ಗ |
|---|---|
| ೧) ಜನತೆಯಿಂದ ಅಧಿಕಾರ ಪಡೆದಿರುತ್ತಾರೆ | ೧) ಅರ್ಹತೆಯ ಆಧಾರದ ಮೇಲೆ ಅಧಿಕಾರ ಪಡೆದಿರುತ್ತಾರೆ |
| ೨) ಸೀಮಿತ ಅವಧಿಯ ಅಧಿಕಾರ | ೨) ಶಾಶ್ವತ ಸೇವಾ ವರ್ಗವಾಗಿದೆ. |
| ೩) ಜನರೊಂದಿಗೆ ನೇರ ಸಂಬಂಧ | ೩) ಜನರೊಂದಿಗೆ ನೇರ ಸಂಬಂಧವಿಲ್ಲ |
| ೪) ನೀತಿ- ಕಾರ್ಯಕ್ರಮವನ್ನು ರೂಪಿಸುತ್ತಾರೆ | ೪) ಅನುಷ್ಠಾನಗೊಳಿಸುವ ಕಾರ್ಯ ನಿರ್ವಹಿಸುತ್ತಾರೆ. |
| ೫) ಜನತೆಗೂ, ಶಾಸಕಾಂಗಕ್ಕೂ ಉತ್ತರ ದಾಯಿಗಳು | ೫) ಮಂತ್ರಿಗಳ ನಿಯಂತ್ರಣದಲ್ಲಿರುತ್ತಾರೆಯೇ ಹೊರತು ಜನತೆಗೆ ಹಾಗೂ ಶಾಸಕಾಂಗಕ್ಕೆ ಉತ್ತರ ದಾಯಿಗಳಲ್ಲ (ಅನಾಮದೇಯತೆ) |
| ೬) ರಾಜಕೀಯಹಿತಾಸಕ್ತಿ ಹೊಂದಿದ್ದಾರೆ | ೬) ರಾಜಕೀಯ ತಾಟಸ್ಥ್ಯತೆಗೆ ಬದ್ಧರಾಗಿದ್ದಾರೆ. |
| ೭) ಯೋಜನೆ ರೂಪಿಸುತ್ತಾರೆ. | ೭) ಸಲಹೆ ಮತ್ತು ನೆರವು ನೀಡುತ್ತಾರೆ. ಅಗತ್ಯ ದತ್ತಾಂಶ ಸಂಗ್ರಹಣೆ ಮಾಡಿ ಕೊಡುತ್ತಾರೆ ಮತ್ತು ಅನುಷ್ಠಾನ ಗೊಳಿಸುವ ಕಾರ್ಯ ಮಾಡುತ್ತಾರೆ. |
| ೮) ಕೆಲವು ವೇಳೆ ಆಡಳಿತ ಜ್ಞಾನ ಮತ್ತು ಅನುಭವವಿಲ್ಲದವರಾಗಿರುತ್ತಾರೆ | ೮) ಅಪಾರ ಆಡಳಿತ ಜ್ಞಾನ ಮತ್ತು ಅನುಭವ ಹೊಂದಿರುತ್ತಾರೆ. |
| ೯) ರಾಜಕೀಯ ಕಾರ್ಯಾಂಗವು ಪ್ರಧಾನಮಂತ್ರಿ ಕ್ಯಾಬಿನೆಟ್‌ಮಂತ್ರಿ, ರಾಜ್ಯಮಂತ್ರಿ, ಸಹಾಯಕ ಅಥವಾ ಉಪಮಂತ್ರಿಯನ್ನು ಒಳಗೊಂಡಿದೆ. | ೯) ಆಡಳಿತ ಅಥವಾ ಶಾಶ್ವತ ಕಾರ್ಯಾಂಗವು ಸಾರ್ವಜನಿಕ ಸೇವಾಸಿಬ್ಬಂದಿ, ಅಂದರೆ ಕಾರ್ಯದರ್ಶಿ, ಜಂಟೀ ಕಾರ್ಯದರ್ಶಿ, ಹೆಚ್ಚುವರಿ ಕಾರ್ಯದರ್ಶಿ ಮತ್ತು ಇತರೆ ಅಧಿಕಾರಿ ವರ್ಗಗಳಿಂದ ಕೂಡಿದೆ. |



ಶಾಶ್ವತ ಕಾರ್ಯಾಂಗ ಅಥವಾ ನಾಗರಿಕ ಸೇವಾ ವರ್ಗವು ಖಾಯಂ ಆದ, ವೇತನ ಪಡೆಯುತ್ತಿರುವ, ವೃತ್ತಿ ನಿರತ ವರ್ಗವಾಗಿದೆ. ಇದನ್ನು ಪ್ರಜಾಪ್ರಭುತ್ವದ ನಾಲ್ಕನೆ ಅಂಗವೆಂತಲೂ ಕರೆಯುತ್ತಾರೆ. ಮಂತ್ರಿಗಳು ರೂಪಿಸುವ ಯೋಜನೆಗಳು, ಕಾನೂನುಗಳು, ನೀತಿ, ಕಾರ್ಯಕ್ರಮ ಇತ್ಯಾದಿಗಳನ್ನು ದಕ್ಷತೆಯಿಂದ ಅನುಷ್ಠಾನಗೊಳಿಸುವುದು ಈ ಅಧಿಕಾರಿಗಳ ಜವಾಬ್ದಾರಿ. ಅದರಲ್ಲಿಯೂ ರಾಜಕೀಯ ಸ್ಥಿತ್ಯಾಂತರಗಳಂತಹ ಸಂದರ್ಭದಲ್ಲಿ ಆಡಳಿತಶಾಹಿಯು ಮಹತ್ವದ ಪಾತ್ರ ನಿರ್ವಹಿಸುತ್ತದೆ. ಸಾಮಾನ್ಯವಾಗಿ ಶಾಶ್ವತ ಕಾರ್ಯಾಂಗವಾದ ಸೇವಾವರ್ಗವು ತಾಟಸ್ಥತೆ ಮತ್ತು ಅನಾಮದೇಯತೆಯ ಲಕ್ಷಣವನ್ನು ಹೊಂದಿದೆ.

**ತಾಟಸ್ಥ್ಯತೆ:**

ನಾಗರೀಕ ಸೇವಾ ವರ್ಗವು ತಾಟಸ್ಥ್ಯತೆ ಲಕ್ಷಣ ಹೊಂದಿದೆ. ಅಂದರೆ ಯಾವುದೇ ರಾಜಕೀಯ ಹಿತಾಸಕ್ತಿಗೆ ಒಳಗಾಗದೆ ನಿಷ್ಪಕ್ಷಪಾತವಾಗಿ - ಪ್ರಮಾಣಿಕವಾಗಿ ಸೇವಾ ಮನೋಭಾವನೆಯಿಂದ ಕಾರ್ಯ ನಿರ್ವಹಿಸುವುದಾಗಿದೆ. ಇದು ಯಾವುದೇ ಪಕ್ಷವು ಅಧಿಕಾರಕ್ಕೆ ಬಂದರೂ ಸಹ ತಾರತಮ್ಯ ರಹಿತ ಸೇವೆ ಒದಗಿಸುತ್ತದೆ ಅಂದರೆ ರಾಜಕೀಯೇತರ ಸ್ವರೂಪವನ್ನು ಪಡೆದಿರುತ್ತದೆ.

**ಅನಾಮದೇಯತೆ:**

ತೆರೆಯ ಮರೆಯಲ್ಲಿ ಕಾರ್ಯ ನಿರ್ವಹಿಸುವುದು ಎಂದರ್ಥ. ಪ್ರಜಾ ಪ್ರಭುತ್ವದಲ್ಲಿ ಮಂತ್ರಿಯು ಸೇವಾವರ್ಗ ನಿರ್ವಹಿಸುವ ಪ್ರತಿಯೊಂದು ಕಾರ್ಯಚಟುವಟಿಕೆಗಳಿಗೂ ಹೊಣೆಗಾರನಾಗಿದ್ದಾನೆ. ಜನತೆಗೆ ಮತ್ತು ಶಾಸಕಾಂಗಕ್ಕೆ ಮಂತ್ರಿಯೇ ಉತ್ತರದಾಯಿಯಾಗಿದ್ದಾನೆ. ಆದರೆ ನಾಗರಿಕ ಸೇವಾವರ್ಗವು ಈ ರೀತಿಯ ಹೊಣೆಗಾರಿಕೆಯಿಂದ ಮುಕ್ತವಾಗಿದೆ. ಕೊನೆಯವರೆಗೂ ಅನಾಮದೇಯರಾಗೇ ಉಳಿಯುತ್ತಾರೆ.

ಒಂದು ಇಲಾಖೆಯಲ್ಲಿ ಮಂತ್ರಿಯು ರಾಜಕೀಯ ಮುಖ್ಯಸ್ಥನಾದರೆ (ರಾಜಕೀಯ ಕಾರ್ಯಾಂಗ) ಕಾರ್ಯದರ್ಶಿಯು ಆಡಳಿತಾತ್ಮಕ ಮುಖ್ಯಸ್ಥ ನಾಗಿರುತ್ತಾನೆ (ಶಾಶ್ವತ ಕಾರ್ಯಂಗ). ಮಂತ್ರಿಯು ಇಲಾಖೆಗೆ ಸಂಬಂಧಿಸಿದ ನೀತಿ-ಕಾರ್ಯಕ್ರಮಗಳನ್ನು ರೂಪಿಸಿದರೆ ಕಾರ್ಯದರ್ಶಿಯು ಅವುಗಳ ಅನುಷ್ಠಾನದ ಜವಾಬ್ದಾರಿ ಹೊಂದಿರುತ್ತಾನೆ. ಕೆಲವು ಸಂದರ್ಭಗಳಲ್ಲಿ ಇಲಾಖೆಯ ಮುಖ್ಯಸ್ಥನಾದ ಮಂತ್ರಿಗೆ ಅನುಭವ ಹಾಗೂ ಆಡಳಿತ ಜ್ಞಾನದ ಕೊರತೆ ಇರಬಹುದು. ಅಂತಹ ಸಂದರ್ಭದಲ್ಲಿ ಸೇವಾವರ್ಗವು (ಅಧಿಕಾರಿಗಳು) ಆತನಿಗೆ ಸೂಕ್ತ ಸಲಹೆಗಳನ್ನು



Scanned with CamScanner

ನೀಡಿ ಆಡಳಿತದ ಸುಗಮ ನಿರ್ವಹಣೆಗೆ ಅವಕಾಶ ಮಾಡಿಕೊಡಬೇಕು. ಆದರೆ ಇತ್ತೀಚಿನ ದಿನಗಳಲ್ಲಿ ಮಂತ್ರಿ ಹಾಗೂ ಅಧಿಕಾರಿಯ ನಡುವಿನ ಸಂಬಂಧವು ಹದಗೆಟ್ಟಿರುವುದು ಸ್ಪಷ್ಟವಾಗಿ ಗೋಚರಿಸುತ್ತಿದೆ. ಸಾಮಾನ್ಯವಾಗಿ ರಾಜಕೀಯ (ಮಂತ್ರಿ) ಹಾಗೂ ಶಾಶ್ವತ (ಅಧಿಕಾರಿ ವರ್ಗ) ಕಾರ್ಯಾಂಗಗಳ ನಡುವಿನ ಸೌಹಾರ್ದತೆಯು ಹದಗೆಡಲು ಈ ಕೆಳಕಂಡ ಅಂಶಗಳು ಕಾರಣವಾಗಿವೆ.

೧) ಅಧಿಕಾರಿಗಳನ್ನು ವರ್ಗಾವಣೆ ಮಾಡುವ ಅಧಿಕಾರ ಮಂತ್ರಿಗಳಿಗಿದೆ. ಸಹಜವಾಗಿ ತಮಗೆ ಹೊಂದಿಕೊಳ್ಳುವ (ತಮ್ಮ ಹಿತಾಸಕ್ತಿಗೆ ಹೊಂದಿಕೊಳ್ಳುವ) ಅಧಿಕಾರಿಗಳನ್ನು ತಮ್ಮ ಇಲಾಖೆಗೆ ವರ್ಗಮಾಡಿಸಿಕೊಳ್ಳುವುದು ಅಧಿಕಾರಿ ವರ್ಗದ ಮೇಲೆ ನಕರಾತ್ಮಕ ಪರಿಣಾಮ ಬೀರುತ್ತದೆ. ಹಲವು ವೇಳೆ ಮಂತ್ರಿಗಳ ಖಾತೆ ಬದಲಾದರೂ ಅಧಿಕಾರಿಗಳ ವರ್ಗಾವಣೆ ಸಾಮಾನ್ಯ. ಹೀಗಾಗಿ ಅಧಿಕಾರ ವರ್ಗವು ನಿಷ್ಪಕ್ಷಪಾತವಾಗಿ ಕಾರ್ಯ ನಿರ್ವಹಿಸುವುದು ಅಸಾಧ್ಯ.

೨) ಇಲಾಖೆಯಲ್ಲಿ ಮಂತ್ರಿಯು ಕಾರ್ಯದರ್ಶಿ ನಿರ್ವಹಿಸುವ ಪ್ರತಿಯೊಂದು ಕಾರ್ಯಗಳಿಗೂ ಜವಾಬ್ದಾರನಾಗಿದ್ದು ಪ್ರತಿಯೊಂದು ತಪ್ಪುಗಳಿಗೂ ಕಾರ್ಯಾದರ್ಶಿಯನ್ನೇ ದೂಷಿಸುವುದು ಮತ್ತು ತಪ್ಪು ಹೊರಿಸುವುದು ಮಂತ್ರಿಯ ಸಹಜ ಪ್ರವೃತ್ತಿಯಾಗಿರುತ್ತದೆ.

೩) ಮಂತ್ರಿಗಳು ದಿನನಿತ್ಯದ ಆಡಳಿತದಲ್ಲಿ ಹಸ್ತಕ್ಷೇಪ ಮಾಡುವುದರಿಂದ ಅಧಿಕಾರಿಗಳಿಗೆ ಕಿರಿಕಿರಿಯುಂಟಾಗುತ್ತದೆ.

೪) ಮಂತ್ರಿಗಳ ಖಾತೆ ಬದಲಾವಣೆ ಮತ್ತು ಅಧಿಕಾರಿ ವರ್ಗದ ಅವೈಜ್ಞಾನಿಕ ವರ್ಗಾವಣೆಯ ಪ್ರಕ್ರಿಯೆಯು ಇತ್ತೀಚಿನ ದಿನಗಳಲ್ಲಿ ಸರ್ವೇ ಸಾಮಾನ್ಯವಾಗಿದ್ದು, ಇದರಿಂದ ಇವರ ನಡುವೆ ಸೂಕ್ತ ಹೊಂದಾಣಿಕೆ ಅಸಾಧ್ಯವಾಗಿದೆ.

೫) ನೌಕರಶಾಹಿ ಅಥವಾ ಸೇವಾ ವರ್ಗವು 'ತಾಟಸ್ಥ್ಯತೆ' ಲಕ್ಷಣ ಹೊಂದಿರುವುದೇನೋಸರಿ, ಆದರೆ ಅವರೂ ಕೂಡ ರಾಜಕೀಯ ಹಿತಾಸಕ್ತಿಗೆ ಬಲಿಯಾಗುತ್ತಿರುವುದು ಗುಟ್ಟಾಗಿ ಉಳಿದಿಲ್ಲ. ಕೆಲವು ಅಧಿಕಾರಿಗಳು ಬಹಿರಂಗವಾಗಿಯೇ ಯಾವುದೋ ಒಂದು ರಾಜಕೀಯ ಪಕ್ಷಕ್ಕೆ ತಮ್ಮ ಬೆಂಬಲ ಸೂಚಿಸಲು ಹಿಂಜರಿಯುವುದಿಲ್ಲ.

೬) ಮಂತ್ರಿಗಳ ಅಹಂ ಭಾವನೆಯು ಮಂತ್ರಿ ಹಾಗೂ ಅಧಿಕಾರಿಗಳ ನಡುವ ಬಿರುಕು ಮಾಡಲು ಪ್ರಮುಖ ಕಾರಣ. ಕೆಲವು ಸಲ ಕಾರ್ಯದರ್ಶಿ ನೀಡಿದ ಉಪಯುಕ್ತ ಸಲಹೆಗಳನ್ನು ಮಂತ್ರಿಯು ಪುರಸ್ಕರಿಸುವ ಗೋಜಿಗೆ ಹೋಗುವುದಿಲ್ಲ.



೭) ಮಂತ್ರಿಗಳು ಮತ್ತು ಕಾರ್ಯದರ್ಶಿಗಳ ನಡುವೆ ಸೈದ್ಧಾಂತಿಕ ವಿಚಾರ, ಜಾತಿ, ಧರ್ಮ, ಸಾಮಾಜಿಕ ಹಿನ್ನಲೆಯ ಬಿನ್ನತೆಗಳಿಂದಲೂ ಮನಸ್ತಾಪ ಮೂಡುವುದು ಸಾಮನ್ಯ.

೮) ಮಂತ್ರಿಯು ಕಾರ್ಯದರ್ಶಿಯನ್ನು ಸಾರ್ವಜನಿಕವಾಗಿ ನಿಂದಿಸುವುದು, ವಾಚಮಗೋಚರವಾಗಿ ಬೈಯುವುದು, ಸೂಕ್ತ ಕಾರಣವಿಲ್ಲದೆ (ಕೆಲವು ವಿಷಯಗಳಿಗೆ ಸಹಕರಿಸದಿದ್ದಾಗ!) ವರ್ಗಾವಣೆ ಮಾಡುವುದು ಮುಂತಾದವುಗಳಿಂದಲೂ ಇವರಿಬ್ಬರ ನಡುವೆ ಸೌಹರ್ದತೆ ಇಲ್ಲವಾಗಿದೆ.

## ಉತ್ತಮ ಆಳ್ವಿಕೆ: (Good governance)

ಉತ್ತಮ ಆಳ್ವಿಕೆ ಎಂಬುದು ಪ್ರತೀ ಕಾಲಘಟ್ಟದಲ್ಲಿನ ಆಡಳಿತಗಾರರ, ರಾಜಕೀಯ ಚಿಂತಕರ, ನೀತಿ-ನಿರೂಪಕರ, ಗಮನಸೆಳೆದ ಮೂಲಭೂತ ಅದರ್ಶ ವಿಚಾರವಾಗಿದೆ. ಅಷ್ಟೇ ಅಲ್ಲದೆ ಯಾವುದೇ ಸಮಾಜದ ನಾಗರಿಕರ ಆದ್ಯತೆಯೂ ಆಗಿದೆ. ಈ ನಿಟ್ಟಿನಲ್ಲಿ ಆಳ್ವಿಕೆಯು ದಕ್ಷವು, ಪರಿಣಾಮಕಾರಿಯು, ಮಿತವ್ಯಯಿಯು, ಮೌಲ್ಯಯುತವು, ನ್ಯಾಯ ಸಮ್ಮತವೂ ಆಗಿರತಕ್ಕದ್ದು. ಅದೇ ರೀತಿ ಆಳ್ವಿಕೆಯ ಪರಿಪಾಲನೆ ಅಥವಾ ಕಾರ್ಯವಿಧಾನವು ನ್ಯಾಯಬದ್ಧವು, ಪಾರದರ್ಶಕವು, ಉತ್ತರದಾಯಿಯೂ ಹಾಗೂ ಜವಾಬ್ದಾರಿಯುತವೂ ಆಗಿರಲೇ ಬೇಕು.

ಆಳ್ವಿಕೆ ಎಂದರೆ ಆಡಳಿತದ ಕಾರ್ಯ ವಿಧಾನ ಅಥವಾ ಪರಿಪಾಲನೆ ಎಂದರ್ಥ, ಉತ್ತಮ ಆಡಳಿತವೆಂದರೆ ಜನತೆಯ ಗರಿಷ್ಠ ಹಿತ ಸಾಧನೆಗೆ ಸಾರ್ವಜನಿಕ ಚಟುವಟಿಕೆಗಳನ್ನು, ನಿರ್ದೇಶಿಸಿ, ನಿಯಂತ್ರಿಸುವುದಾಗಿದೆ. ಉತ್ತಮ ಆಳ್ವಿಕೆ ಮತ್ತು ಪ್ರಜಾಪ್ರಭುತ್ವಗಳೆರೆಡೂ ಜನತೆ ಹಾಗೂ ಸರ್ಕಾರದ ನಡುವಿನ ಗುಣಮಟ್ಟದ ಸಂಬಂಧವನ್ನು ನಿರೂಪಿಸುತ್ತವೆ. ಮತ್ತು ಜನರನ್ನು ಆಡಳಿತ ಚಟುವಟಿಕೆಗಳಲ್ಲಿ ಕೇಂದ್ರ ಬಿಂದು ಅಥವಾ ಬಾಗೀದಾರರನ್ನಾಗಿಸಲು ಹಕ್ಕೊತ್ತಾಯಿಸುತ್ತವೆ.

ಇತ್ತೀಚಿನ ದಿನಗಳಲ್ಲಿ ದೇಶಗಳ ಅಭಿವೃದ್ಧಿ ಸಾಧನೆ ಮತ್ತು ನಾಗರೀಕ ಕುಂದು ಕೊರತೆಗಳ ನಿವಾರಣೆಯಲ್ಲಿ 'ಉತ್ತಮ ಆಳ್ವಿಕೆ' ಎಂಬ ಪರಿಕಲ್ಪನೆಯು ಪರಿಣಾಮಕಾರಿ ಸಾಧನವಾಗಿ ಸಾರ್ವತ್ರಿಕಮನ್ನಣೆಪಡೆದಿದೆ. ಉತ್ತಮ ಆಳ್ವಿಕೆಯು ಸರ್ಕಾರದ ವ್ಯವಹಾರಗಳ ಗುಣಮಟ್ಟದ ನಿರ್ವಹಣೆಯನ್ನು ಸೂಚಿಸುತ್ತದೆ. ಇದು ಸರ್ಕಾರದ ಮೂರು ಅಂಗಗಳನ್ನಷ್ಟೇ ಅಲ್ಲದೇ ಖಾಸಗೀ ವಲಯ, ಸರ್ಕಾರೇತರ ಸಂಸ್ಥೆಗಳು ಮತ್ತು ನಾಗರಿಕ ಸಮಾಜದ ಸಹಕಾರವನ್ನೊಳಗೊಂಡಿದೆ. ಒಟ್ಟಿನಲ್ಲಿ ಉತ್ತಮ ಆಳ್ವಿಕೆ ಎಂಬುದು ರಾಜಕೀಯ ಮೌಲ್ಯಗಳನ್ನೊಳಗೊಂಡ ಜನಾಧಾರಿತ



Scanned with CamScanner

ಆಡಳಿತ ಪರಿಪಾಲನೆಯಾಗಿದೆ. ರಾಜಕೀಯ ಮೌಲ್ಯಗಳೆಂದರೆ ವಿಕೇಂದ್ರೀಕರಣ, ಜನರ ಸಹಭಾಗಿತ್ವ, ಪಾರದರ್ಶಕತೆ, ಉತ್ತರದಾಯಿತ್ವ, ವಿಧಿಬದ್ಧ ಅಧಿಕಾರ, ಕಾನೂನಿನ ಅಧಿಪತ್ಯ, ಮಾನವ ಹಕ್ಕುಗಳ ರಕ್ಷಣೆ, ಸ್ವತಂತ್ರ ನ್ಯಾಯಾಂಗ, ಖಾಸಗೀ ಸಹಭಾಗಿತ್ವ ಮುಂತಾದವುಗಳನ್ನು ಒಳಗೊಂಡಿದೆ.

**ನರೇಂದ್ರ ಮೋದಿ:** "ಉತ್ತಮ ಆಳ್ವಿಕೆಯು ಅಭಿವೃದ್ಧಿಯ ಕೀಲಿಕೈ ಇದ್ದಂತೆ, ಇದು ಜನಸಾಮಾನ್ಯನನ್ನು ಅಭಿವೃದ್ಧಿ ಪ್ರಕ್ರಿಯೆಯ ಕೇಂದ್ರ ಬಿಂದುವನ್ನಾಗಿಸಿದೆ".

**ಕೋಫಿ ಅನ್ನಾನ್:** "ಉತ್ತಮ ಅಳ್ವಿಕೆಯು ಬಡತನ ನಿರ್ಮೂಲನೆ ಮತ್ತು ಅಭಿವೃದ್ಧಿ ಕಾರ್ಯಗಳಿಗೆ ಬೇಕಾದ ಅಗತ್ಯಾಂಶವಾಗಿದೆ".

**ಉತ್ತಮ ಆಳ್ವಿಕೆಯ ತತ್ವಗಳು (ಲಕ್ಷಣಗಳು)**

೧) **ಉತ್ತರದಾಯಿತ್ವ:**

ಉತ್ತರದಾಯಿತ್ವವು ಉತ್ತಮ ಆಳ್ವಿಕೆಯ ಪ್ರಧಾನ ಅಂಶವಾಗಿದೆ. ಸಮುದಾಯವನ್ನು ಪ್ರತಿನಿಧಿಸುವ ಆಡಳಿತ ಪರಿಪಾಲನೆಯು ತಾನು ತೆಗೆದುಕೊಂಡು ತೀರ್ಮಾನಗಳು, ನೀತಿ ಕಾರ್ಯಕ್ರಮಗಳ ಬಗ್ಗೆ ಮತ್ತು ಅವುಗಳ ಫಲಿತಾಂಶಗಳ ಬಗ್ಗೆ ಉತ್ತರದಾಯಿಗಿರತಕ್ಕದ್ದು. ಇದು ಆಡಳಿತ ನಿರ್ವಹಣೆಯು ಮತ್ತಷ್ಟು ದಕ್ಷ ಹಾಗೂ ಪ್ರಮಾಣಿಕವಾಗಿರುವಂತೆ ಮಾಡುತ್ತದೆ.

೨) **ಪಾರದರ್ಶಕತೆ:**

ಜನತೆಗೆ ಸರ್ಕಾರದ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡುವುದು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಅವಶ್ಯಕ. ಹಾಗೆಯೇ ನಾಗರೀಕರು ಸರ್ಕಾರದ ದೈನಂದಿನ ವ್ಯವಹಾರಗಳ ಮೇಲೆ ನಿಗಾವಹಿಸುವುದರಿಂದ ಆಡಳಿತವು ಪಾರದರ್ಶಕವಾಗಿ ನಡೆಯುವಂತೆ ಮಾಡಬುಹುದು. ಪಾರದರ್ಶಕತೆ ಎಂದರೆ ಸರ್ಕಾರದ ಎಲ್ಲಾ ಚಟುವಟಿಕೆಗಳ ನಿರ್ವಹಣೆಗೆ ನ್ಯಾಯಸಮ್ಮತವಾದ ವಿಧಿ ವಿಧಾನವನ್ನು ಅಳವಡಿಸಿಕೊಳ್ಳುವುದು.

೩) **ಕಾನೂನಿನ ಅಧಿಪತ್ಯ:**

ಕಾನೂನಿನ ಅಧಿಪತ್ಯವೆಂದರೆ 'ಕಾನೂನಿನಮುಂದೆ ಎಲ್ಲರೂ ಸಮಾನರು ಹಾಗೂ ಕಾನೂನು ಎಲ್ಲರನ್ನು ಸಮಾನವಾಗಿ ಪರಿಗಣಿಸಬೇಕು ಎಂಬುದಾಗಿದೆ. ಮತ್ತೊಂದು ಅರ್ಥದಲ್ಲಿ ಆಡಳಿತಾಂಗವು ನೆಲದ ಕಾನೂನು ಹಾಗೂ ಸಂವಿಧಾನದ ಚೌಕಟ್ಟಿನಲ್ಲಿಯೇ ಕಾರ್ಯನಿರ್ವಹಿಸಬೇಕು.



೪) ಅಧಿಕಾರ ವಿಕೇಂದ್ರೀಕರಣ:

ಪ್ರಜಾಸತಾತ್ಮಕ ತತ್ವಕ್ಕನುಸಾರವಾಗಿ ಜನತೆಗೆ ಆಡಳಿತದಲ್ಲಿ ಭಾಗವಹಿಸಲು ಅವಕಾಶವಿರಬೇಕು. ಸರ್ಕಾರದ ನೀತಿನಿರ್ಧಾರಗಳಲ್ಲಿ -ಕಾರ್ಯಕ್ರಮಗಳಲ್ಲಿ ಜನತೆಯ ಅಭಿಪ್ರಾಯ ಕೇಳುವುದು, ಅವರಿಂದ ಮಾಹಿತಿ ಸಂಗ್ರಹಿಸುವುದು. ಅವರ ಸಲಹೆಗಳಿಗೂ ಮುನ್ನಣೆ ನೀಡುವುದು ಮತ್ತು ಅವರನ್ನು ಆಡಳಿತದಲ್ಲಿ ಬಾಗೀದಾರರನ್ನಾಗಿಸುವುದು ಉತ್ತಮ ಆಳ್ವಿಕತೆಯ ಲಕ್ಷಣವಾಗಿದೆ. ಸ್ಥಳೀಯ ಸರ್ಕಾರಗಳು ದೇಶದ ಆಡಳಿತದಲ್ಲಿ ಪರಿಣಾಮಕಾರಿ ಪಾತ್ರ ನಿರ್ವಹಿಸುತ್ತಿವೆ. ಅದುದರಿಂದ ಅವುಗಳಿಗೂ ಸ್ವಯತ್ತತೆ ನೀಡುವುದು ನಿಜವಾದ ವಿಕೇಂದ್ರೀಕರಣವಾಗಿದೆ.

೫ ಪ್ರತಿಯೊಬ್ಬ ಪ್ರಜೆಗೂ ಕನಿಷ್ಠ ಜೀವನ ಮಟ್ಟದ ಖಾತ್ರಿ ನೀಡುವುದು. ಈ ನಿಟ್ಟಿನಲ್ಲಿ ಸಮಾಜದ ದುರ್ಬಲ ವರ್ಗಗಳ ಸಬಲೀಕರಣಕ್ಕೆ ಅಗತ್ಯಕ್ರಮ ತೆಗೆದುಕೊಳ್ಳುವುದು.

೬) ಉತ್ಪಧನಾ ಸಾಧನಗಳ ಒಡೆತನ ಮತ್ತು ನಿಯಂತ್ರಣವು ಸಮುದಾಯದ ಹಿತ ಸಾಧನೆಗೆ ಹಂಚಿಕೆಯಾಗುವಂತೆ ಮಾಡುವುದು.

೭) ಸರ್ಕಾರ ಮತ್ತು ನಾಗರೀಕರ ನಡುವೆ ಉತ್ತಮ ಸಹಕಾರ.

೮) ಅಧಿಕಾರ ದುರುಪಯೋಗ ಹಾಗೂ ಭ್ರಷ್ಟಾಚಾರ ಮುಕ್ತ ಆಡಳಿತ.

೯) ವಿಜ್ಞಾನ ಮತ್ತು ತಂತ್ರಜ್ಞಾನಗಳ ಪರಿಣಾಮಕಾರಿ ಬಳಕೆ.

೧೦) ನಾಗರೀಕರ ಕುಂದು ಕೊರತೆಗಳ ಬಗ್ಗೆ ಶೀಘ್ರಗತಿಯ ಸ್ಪಂಧನೆ.

೧೧) ಸ್ವತಂತ್ರ ನ್ಯಾಯಾಂಗ ಮತ್ತು ಲಿಖಿತ ಸಂವಿಧಾನ, ಆಮೂಲಕ ಪ್ರಜೆಗಳ ಹಕ್ಕುಗಳ ರಕ್ಷಣೆ.

೧೨) ಸೇವಾ ಮನೋಭಾವನೆಯುಳ್ಳ ನೌಕರಷಾಯಿ

**"ಭಾರತದಸಂದರ್ಭದಲ್ಲಿ ಉತ್ತಮ ಆಡಳಿತ ಪರಿಕಲ್ಪನೆ".**

ಪ್ರಾಚೀನ ರಾಜ-ಮಹಾರಾಜರ ಆಳ್ವಿಕೆಯ ಕಾಲಘಟ್ಟದಿಂದ ಇಂದಿನ ಆಧುನಿಕ ಪ್ರಜಾಸತಾತ್ಮಕ ಸರ್ಕಾರ ವ್ಯವಸ್ಥೆಯ ತನಕ ಭಾರತದಲ್ಲಿ ಉತ್ತಮ ಆಳ್ವಿಕೆ ಎಂಬ ಪರಿಕಲ್ಪನೆಯು ಪ್ರಧಾನಪಾತ್ರ ನಿರ್ವಹಿಸುತ್ತಾ ಬಂದಿದೆ. ಮಹಾಕಾವ್ಯಗಳಾದ ರಾಮಾಯಣ ಮಾಹಾಭಾರತ, ಕೌಟಿಲ್ಯನ ಅರ್ಥಶಾಸ್ತ್ರಗಳು ಯವರೀತಿ ಪ್ರಜಾಪಾಲನೆ ನಿರ್ವಹಿಸಬೇಕೆಂದು ಆಳುವ ವರ್ಗಕ್ಕೆ ನಿರ್ಧೇಶನಗಳನ್ನು ನೀಡಿವೆ. ರಾಮಾಯಣ



Scanned with CamScanner

ಹಾಗೆಯೇ ಮಹಾಭಾರತ ಮಹಾಕಾವ್ಯದಲ್ಲಿ ರಾಜನ [illegible] ಯಾವಕಾಲಕ್ಕೂ ಸತ್ಯ, ಧರ್ಮ ಹಾಗೂ ನೈತಿಕತೆಗಳನ್ನು ಆಧರಿಸಿಬೇಕೆಂದು ತಿಳಿಸಲಾಗಿದೆ. ಈ ಅಂಶಗಳು ಸಹ ಉತ್ತಮ ಆಳ್ವಿಕೆಯ ಲಕ್ಷಣಗಳೇ ಆಗಿದೆ.

ಕೌಟಿಲ್ಯನ ಅರ್ಥಶಾಸ್ತ್ರ ಗ್ರಂಥವನ್ನು ಆಡಳಿತಗಾರರ ಕೈಪಿಡಿಯೆಂದೇ ಬಾವಿಸಲಾಗಿದೆ. ಈ ಗ್ರಂಥದಲ್ಲಿ ಕೌಟಿಲ್ಯನು ಉತ್ತಮ ಆಳ್ವಿಕೆಯ ಅಗತ್ಯತೆಯನ್ನು ಹೇಳಿದ್ದಾನೆ. ಅಲ್ಲದೇ ಉತ್ತಮ ಆಳ್ವಿಕೆಯ ಅಗತ್ಯಾಂಶಗಳನ್ನು ವಿವರಿಸಿದ್ದಾನೆ, ಅವುಗಳೆಂದರೆ. ಕಾನೂನು ಮತ್ತು ಸುವ್ಯವಸ್ಥೆ, ಜನಪರ ಕಾಳಜಿಯುಳ್ಳ ಆಡಳಿತಾಂಗ, ನ್ಯಾಯ ಹಾಗೂ ವೈಚಾರಿಕತೆಯನ್ನಾಧರಿಸಿದ ತೀರ್ಮಾನಗಳು, ಭ್ರಷ್ಟಮುಕ್ತ ಆಳ್ವಿಕೆ, ವೈಜ್ಞಾನಿಕ ಕಂದಾಯ ವಸೂಲಿ ಹಾಗೂ ಖಜಾನೆಯ ಸಂರಕ್ಷಣೆ ಮುಂತಾದ ಉತ್ತಮ ಆಳ್ವಿಕೆಯ ಅಂಶಗಳನ್ನು ತಿಳಿಸಿದ್ದಾನೆ.

ಭಾರತದಲ್ಲಿ ಬ್ರಿಟಿಷ್ ಆಡಳಿತವು ಬಲವಂತದ ಹಾಗೂ ದಬ್ಬಾಳಿಕೆಯ ಸ್ವರೂಪ ಪಡೆದಿದೆಯಾದರೂ ಬ್ರಿಟಿಷ್ ಆಡಳಿತ ವ್ಯವಸ್ಥೆಯಲ್ಲಿ ಹಲವು 'ಉತ್ತಮ ಆಳ್ವಿಕೆಯ' ಲಕ್ಷಣಗಳನ್ನು ಕಾಣಬಹುದು. ಕೈಗಾರಿಕೆಗಳ ಅಭಿವೃದ್ಧಿ, ವಿಜ್ಞಾನ,-ತಂತ್ರಜ್ಞಾನ, ಸಾರಿಗೆ-ಸಂಪರ್ಕ, ನ್ಯಾಯಾಂಗ ವ್ಯವಸ್ಥೆ, ಭಾರತೀಯ ದಂಡ ಸಂಹಿತೆ, ಶಿಕ್ಷಣ ಮುಂತಾದ ಕ್ಷೇತ್ರಗಳಲ್ಲಿ ಸಾಧಿಸಿದ ಅಭಿವೃದ್ಧಿಯು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ನಮಗೆ ಒಳಿತನ್ನೆ ಮಾಡಿವೆ.

ಸ್ವತಂತ್ರ್ಯ ಭಾರತದಲ್ಲಿ ಆಸ್ತಿತ್ವಕ್ಕೆ ಬಂದ ನಮ್ಮ ಸಂವಿಧಾನವು ಉತ್ತಮ ಆಳ್ವಿಕೆಯ ಜಾರಿಗಾಗಿ ಆಡಳಿತಾಂಗಕ್ಕೆ ನಿರ್ದೇಶನವನ್ನು ನೀಡಿದೆ. ಸಂವಿಧಾನದ ಪ್ರಸ್ತಾವನೆಯಲ್ಲಿಯೇ ಪ್ರಜೆಗಳಿಗೆ ಸಾಮಾಜಿಕ, ಆರ್ಥಿಕ, ರಾಜಕೀಯ ಸಮಾನತೆಗಳ ಭರವಸೆ ನೀಡಲಾಗಿದೆ. ಸಂವಿಧಾನದ ೧೪ನೇ ವಿಧಿಯಿಂದ ೩೨ನೇ ವಿಧಿಯವರೆಗೂ ನೀಡಲಾಗಿರುವ ಮೂಲಭೂತ ಹಕ್ಕುಗಳು, ೩೬ನೇ ವಿಧಿಯಿಂದ ೫೧ನೇ ವಿಧಿಯವರೆಗಿನ ರಾಜ್ಯನೀತಿ ನಿರ್ದೇಶಕ ತತ್ವಗಳು (ಸಾಮಾಜೋ-ಆರ್ಥಿಕ ಸುನಿಶ್ಚಿತಾ ಕಾರ್ಯಕ್ರಮಗಳು), ದೇಶದ ಮುಖ್ಯಸ್ಥನನ್ನು ಚುನಾವಣೆ ಮೂಲಕ ನೇಮಕ ಮಾಡುವುದು (ಗಣರಾಜ್ಯ), ಮಂತ್ರಿಮಂಡಲದ ಹೊಣೆಗಾರಿಕೆ, ಸಾರ್ವಜನಿಕ ಹಣಕಾಸಿನ ಮೇಲೆ ನಿಯಂತ್ರಣಗಳು, ಸ್ವತಂತ್ರ ಹಾಗೂ ನಿಷ್ಪಕ್ಷಪಾತ ನ್ಯಾಯಾಂಗ, ನ್ಯಾಯಸಮ್ಮತ ಚುನಾವಣಾ ವ್ಯವಸ್ಥೆ, ೭೩ ಹಾಗೂ ೭೪ನೇ ತಿದ್ದುಪಡಿಯ ಮೂಲಕ



ಮಹಾತ್ಮ ಗಾಂಧೀಜಿಯವರ ಸ್ವರಾಜ್ಯ, ಸುರಾಜ್ಯ [illegible] ಗೊ-ಹತ್ಯೆ ನಿಷೇಧ, ಪಾನನಿರೋಧ, ಗುಡಿಕೈಗಾರಿಕೆಗಳ ಅಭಿವೃದ್ಧಿ ಸ್ಥಳೀಯ ಸರ್ಕಾರಗಳ ಬಲವರ್ಧನೆ, ಮತ್ತು ಡಾ॥ಬಿ.ಆರ್ ಅಂಬೇಡ್ಕರ್‌ರವರ ಸಾಮಜಿಕ ಸಮಾನತೆ, ಸಾಮಾಜಿಕ ನ್ಯಾಯ, ಅಸ್ಪೃಶ್ಯತೆಯ ನಿವಾರಣೆ, ದುರ್ಬಲ ವರ್ಗದವರ ಕಲ್ಯಾಣ ಮುಂತಾದವು ಉತ್ತಮ ಆಳ್ವಿಕೆಯ ಅಂಶಗಳೇ ಆಗಿದೆ.

ಸ್ವತಂತ್ರ್ಯ ಭಾರತದಲ್ಲಿ ಅಸ್ತಿತ್ವಕ್ಕೆ ಬಂದ ಸರ್ಕಾರಗಳು ಹಲವು ಜನಪರ ಕಾರ್ಯಕ್ರಮಗಳನ್ನು ಜಾರಿಗೊಳಿಸುತ್ತಲೇ ಬಂದಿವೆ. ಅನೇಕ ಸಾಮಾಜಿಕ ಆರ್ಥಿಕ ಸುನಿಶ್ಚಿತಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ. ಇಂದು ಸರ್ಕಾರದ ಆಡಳಿತ ಸ್ವರೂಪ ಸಾಕಷ್ಟು ಬದಲಾಗಿದೆ. ಇ-ಆಳ್ವಿಕೆ, ಅಭಿವೃದ್ಧಿ ಆಡಳಿತ, ಕಲ್ಯಾಣರಾಜ್ಯ, ಜಾಗತೀಕರಣ ಮುಂತಾದ ಪ್ರಕ್ರಿಯೆಗಳಿಂದ ಸರ್ಕಾರವು ಜನಸಾಮನ್ಯನನ್ನು ಗ್ರಾಹಕನೆಂದು ಪರಿಗಣಿಸಿ ಸೇವೆಯನ್ನು ನೀಡಲಾಗುತ್ತಿದೆ. ಇಂದು ಪ್ರತಿಯೊಬ್ಬ ನಾಗರಿಕನು ಸರ್ಕಾರದ ಆಳ್ವಿಕೆಯು ಪಾರದರ್ಶಕವಾಗಿರಬೇಕೆಂದು ಮತ್ತು ನ್ಯಾಯಸಮ್ಮತವಾಗಿರಬೇಕೆಂದು ಆಪೇಕ್ಷಿಸುತ್ತಾನೆ. ಈನಿಟ್ಟಿನಲ್ಲಿ ಸರ್ಕಾರಗಳು ಅಸಂಖ್ಯಾತ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಲೇ ಇದ್ದು, ಆಡಳಿತಾಂಗವನ್ನು ಚುರುಕುಗೊಳಿಸುವ ಅಥವಾ ಸುಧಾರಣೆಗೊಳಪಡಿಸುವ ಮೂಲಕ ಉತ್ತಮ ಆಳ್ವಿಕೆಯ ಪರಿಣಾಮಕಾರಿ ಜಾರಿಗೆ ಅಹರ್ನಿಶಿ ಪ್ರಯತ್ನಿಸುತ್ತಿವೆ.

**ಇ-ಆಳ್ವಿಕೆ: (Electronic -governance)**

"ಇ- ಆಳ್ವಿಕೆಯು, ನೈಜ್ಯ, ಅಧಿಕೃತಮಾಹಿತಿಯು ಯಾವುದೇ ಗಡಿ, ಮಿತಿ ಇಲ್ಲದೆ ಎಲ್ಲರಿಗೂ ಸಿಗುವಂತೆ ಹಾಗೂ ಸುರಕ್ಷಿತವಾಗಿ ಹರಿಯುವ, ಪಾರದರ್ಶಕವೂ, ಜಾಣವೂ ಆಗಿರುವ ಆಡಳಿತ ಪದ್ಧತಿಯಾಗಿದೆ. ಇಲ್ಲಿ ಸರ್ಕಾರದ ಇಲಾಖೆಗಳ ಗಡಿಗಳಿಲ್ಲ, ನಾಗರೀಕರಿಗೆ ಸೇವೆಯು ತಾರತಮ್ಯವಿಲ್ಲದೆ, ನ್ಯಾಯ ಸಮ್ಮತವಾಗಿ ಸಿಗುವುದು". ಡಾ॥ ಎ.ಪಿ.ಜಿ. ಅಬ್ದುಲ್ ಕಲಾಂ

ಇ-ಆಡಳಿತವು ಉತ್ತಮ ಆಳ್ವಿಕೆಗೆ (Good Governance), ಮತ್ತು ಅಭಿವೃದ್ಧಿ ಆಡಳಿತಕ್ಕೆ ಪೂರಕವಾದುದಾಗಿದೆ. ಇ-ಆಳ್ವಿಕೆಯೆಂದರೆ "ವಿದ್ಯುನ್ಮಾನ ಸಾಧನಗಳು ಮತ್ತು ಮಾಹಿತಿ ತಂತ್ರಜ್ಞಾನವನ್ನು ಬಳಸಿಕೊಂಡು ಸಾರ್ವಜನಿಕರಿಗೆ ಸೇವೆ ಮತ್ತು ಮಾಹಿತಿ ಒದಗಿಸುವುದಾಗಿದೆ". ಇದರಿಂದ ಸರ್ಕಾರ ನೀಡುವ



Scanned with CamScanner

೨) ಜನತೆಗೆ ಶೀಘ್ರ ಗತಿಯ [illegible]
ಪಡಿಸುತ್ತದೆ.

೩) ಇ–ಆಳ್ವಿಕೆಯಿಂದ ಆಡಳಿತಾಂಗದಲ್ಲಿ ದಕ್ಷತೆವುಂಟಾಗುತ್ತದೆ.

೪) ಇ–ಆಳ್ವಿಕೆಯು ಸರ್ಕಾರ ಮತ್ತು ಜನತೆ ಹಾಗೂ ಸರ್ಕಾರದ ವಿವಿಧ ಇಲಾಖೆಗಳ ನಡುವೆ ಪರಿಣಾಮಕಾರಿಯಾದ ಸಂಪರ್ಕ ಸಾಧನವಾಗಿದೆ.

೫) ಆಡಳಿತದಲ್ಲಿ ಜನರ ಪರಿಣಾಮಕಾರಿ ಭಾಗವಹಿಸುವಿಕೆಗೆ ಇದು ಸಹಾಯಕವಾಗಿದೆ.

೬) ವಿವಿಧ ಇಲಾಖೆಗಳ ನಡುವೆ ಮತ್ತು ಅಧಿಕಾರಿಗಳ ನಡುವೆ ಸಮನ್ವಯವನ್ನುಂಟು ಮಾಡುತ್ತದೆ.

೭) ಸರ್ಕಾರದ ವೈವಿದ್ಯಮಯ ಸೇವೆಗಳನ್ನು ಸಮಗ್ರೀಕರಣಗೊಳಿಸಿ ಶೀಘ್ರವಾಗಿ ಜನರ ಕುಂದು ಕೊರತೆಗಳನ್ನು ನಿವಾರಿಸಬಹುದಾಗಿದೆ.

೮) ಸರ್ಕಾರದ ವಿವಿಧ ಯೋಜನೆಗಳು, ಕಾರ್ಯಕ್ರಮಗಳು ಹಾಗೂ ನೀತಿಗಳನ್ನು ಪರಿಣಾಮಾಕಾರಿಯಾಗಿ ಅನುಷ್ಠಾನಗೊಳಿಸಬಹುದಾಗಿದೆ.

೯) ಭಾರತದಂತಹ ಅಭಿವೃದ್ಧಿ ಶೀಲ ರಾಷ್ಟಗಳು ಎದುರಿಸುತ್ತಿರುವ ಅನೇಕ ರೀತಿಯ ಸಮಸ್ಯಗಳ ನಿವಾರಣೆಗೆ ಇ–ಆಳ್ವಿಕೆಯು ಅವಶ್ಯವಿದೆ. ಆಡಳಿತಾಂಗದ ಅದಕ್ಷತೆ, ಅನಕ್ಷರತೆ, ನಿರುದ್ಯೋಗ, ಬಡತನ, ಅಪರಾದ ಪ್ರಕರಣಗಳ ಹೆಚ್ಚಳ,



ಉಪಯುಕ್ತವಾದುದಾಗಿದೆ. ಜನತೆಗೆ ಸರ್ಕಾರದ ಗುಣಮಟ್ಟದ ಸೇವೆಯನ್ನು ಪ್ರವಾಣೀಕರಿಸುವುದರ ಜೊತೆಗೆ ಜನಸಾವಾನ್ಯನನ್ನು ಆಡಳಿತಾಂಗದ ಬಾಗೀಧಾರನನ್ನಾಗಿಸಿದೆ. ಇದು ಸರ್ಕಾರದ ಆಡಳಿತದಲ್ಲಿ ಪಾರದರ್ಶಿಕತೆಯನ್ನು ಉತ್ತರದಾಯಿತ್ವವನ್ನು, ಮಿತವ್ಯಯವನ್ನು ತರುವುದರಲ್ಲಿ ಪ್ರಮುಖ ಪಾತ್ರ ವಹಿಸಿದೆ. ಪರಿಣಾಮ ಇಂದು ವಿಶ್ವದ ಬಹುತೇಕ ರಾಷ್ಟ್ರಗಳ ಅಭಿವೃದ್ಧಿ ಕಾರ್ಯ ಕ್ರಮಗಳು ತಂತ್ರಜ್ಞಾನಾಧಾರಿತವಾಗಿವೆ. ಅಷ್ಟೆ ಅಲ್ಲದೇ ರಾಷ್ಟ್ರ ರಾಷ್ಟ್ರಗಳ ನಡುವಿನ ಎಲ್ಲಾ ಬಗೆಯ ವಿನಿಮಯಗಳಿಗೂ ಹಾಗೂ ಬಾಂಧವ್ಯಕ್ಕು ಇ–ಆಳ್ವಿಕೆಯು ಬಹು ಮುಖ್ಯ ಸಾಧನವಾಗಿದೆ.

**ಭಾರತದಲ್ಲಿ ಇ–ಆಳ್ವಿಕೆಯ ಪರಿಕಲ್ಪನೆ:**

ಭಾರತದ ಸಂದರ್ಭದಲ್ಲಿ ಇ–ಆಳ್ವಿಕೆ ಅಥವಾ ಇ–ಸೇವೆ ಎಂಬ ಪರಿಕಲ್ಪನೆಯು ಹೆಚ್ಚು ಪ್ರಸ್ತುತವಾದುದಾಗಿದೆ ಭಾಷೆ, ಸಂಸ್ಕೃತಿ, ಭೌಗೋಳಿಕತೆ ಹೀಗೆ ಹಲವು ವಿಚಾರಗಳಲ್ಲಿ ವೈವಿದ್ಯತೆ ಹೊಂದಿರುವ ಈ ಬೃಹತ್ ರಾಷ್ಟ್ರದಲ್ಲಿ ಸರ್ಕಾರದ ಸೇವೆಯು ಮತ್ತು ಅದರ ಬಗೆಗಿನ ಮಾಹಿತಿಯು ಪ್ರತಿಯೊಬ್ಬ ಜನ ಸಾಮಾನ್ಯನಿಗೂ ತಲುಪಿಸುವುದು ಸವಾಲಿನ ಕಾರ್ಯವಾಗಿದೆ. ಈ ಉದ್ದೇಶ ಸಾಧನೆಗಾಗಿ ಕೇಂದ್ರ ಸರ್ಕಾರವನ್ನೊಳಗೊಂಡಂತೆ ಪ್ರತಿಯೊಂದು ರಾಜ್ಯ ಸಾರ್ಕಾರಗಳು ಇಂದು ತಂತ್ರ

ಜ್ಞಾನದ ಮೊರೆ ಹೋಗಿವೆ. ತಮ್ಮ ಧ್ಯೇಯೋದ್ದೇಶಗಳನ್ನು ಸಾಕಾರಗೊಳಿಸಲು ಮಾಹಿತಿ-ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವ ಮೂಲಕ ಇ-ಆಳ್ವಿಕೆಯ ಪರಿಕಲ್ಪನೆಯನ್ನು ಅನುಷ್ಠಾನಗೊಳಿಸಲು ವಿವಿಧ ಯೋಜನೆಗಳನ್ನು ಜಾರಿಗೆ ತರಲಾಗುತ್ತಿದೆ. ಇದರ ಮೂಲಕ ಶ್ರೀ ಸಾಮಾನ್ಯನನ್ನು ಅಭಿವೃದ್ಧಿಯ ಕೇಂದ್ರಬಿಂದುವನ್ನಾಗಿಸುವ ಮತ್ತು ಆಡಳಿತ ನಿರ್ವಹಣೆಯನ್ನು ಪಾರದರ್ಶಕ ವನ್ನಾಗಿಸುವ, ಸರಳವಾಗಿಸುವ, ಪ್ರಯತ್ನಗಳೂ ಚಾಲ್ತಿಯಲ್ಲಿವೆ. ಜಾಗತೀಕರಣ, ಉದಾರೀಕರಣ, ಮುಕ್ತ ಮಾರುಕಟ್ಟೆಗಳ ಈ ಕಾಲಘಟ್ಟದಲ್ಲಿ ಅಭಿವೃದ್ಧಿಶೀಲ ದೇಶಕ್ಕೆ ಇದು ಅನಿವಾರ್ಯವೂ ಆಗಿದೆ.

ಇದರ ಮಹತ್ವವನ್ನರಿತ ಭಾರತ ಸರ್ಕಾರವು ಮಾಹಿತಿ-ಸಂಪರ್ಕ ತಂತ್ರಜ್ಞಾನ ಇಲಾಖೆಯನ್ನು ಸ್ಥಾಪಿಸಿದೆ. ಇದರಡಿಯಲ್ಲಿ ಸ್ಥಾಪಿಸಲಾದ 'ರಾಷ್ಟ್ರೀಯ ಇನ್‌ಫಾರ್ಮ್ಯಾಟಿಕ್ಸ್ ಕೇಂದ್ರ' (National informatioc center –NIC ೧೯೭೭) ಮತ್ತು ನಂತರದಲ್ಲಿ ಪ್ರಾರಂಭಿಸಲಾದ 'ರಾಷ್ಟ್ರೀಯ (ಉಪಗ್ರಹ ಆಧಾರಿತ) ಗಣಕೀಕೃತ ಜಾಲಬಂಧಿ (National Satelite based computer network ೧೯೮೭) ಗಳು ಇ-ಆಳ್ವಿಕೆಯ ಅನುಷ್ಠಾನದಲ್ಲಿ ಪ್ರಧಾನ ಪಾತ್ರ ನಿರ್ವಹಿಸಿವೆ. ೧೯೭೬ರಲ್ಲಿ ಸ್ಥಾಪಿತವಾದ ರಾಷ್ಟ್ರೀಯ ಇನ್‌ಫಾರ್ಮ್ಯಾಟಿಕ್ ಸಂಸ್ಥೆಯು ಕೇಂದ್ರ, ರಾಜ್ಯ ಹಾಗೂ ಒಕ್ಕೂಟ ಪ್ರದೇಶಗಳು ಹಾಗು ಜಿಲ್ಲಾಡಳಿತಗಳೊಂದಿಗೆ ಸಾಂಸ್ಥಿಕ ಕೊಂಡಿಯನ್ನು ಹೊಂದಿದ್ದು ಇದು ಅವುಗಳ ಆಡಳಿತ ಸುಧಾರಣೆ, ಸೇವೆಯಲ್ಲಿ ಗುಣಮಟ್ಟ, ಪಾರದರ್ಶಿಕತೆ, ಮುಖ್ಯವಾಗಿ ಆಡಳಿತ ವಿಕೇಂದ್ರೀಕರಣ ಗೊಳಿಸಲು ಮತ್ತು ಆಡಳಿತದಲ್ಲಿ ದಕ್ಷತೆವುಂಟು ಮಾಡಲು ಸಹಾಯಕವಾಗಿದೆ. ಇದು (NIC) ಸರ್ಕಾರದ ಇ-ಆಳ್ವಿಕೆಗೆ ಸಂಬಂಧಿಸಿದ ಯೋಜನೆಗಳಿಗೆ ಸಹಾಯಕವಾಗಿದೆ. ಉದಾಹರಣೆಗೆ ರಾಷ್ಟ್ರೀಯ ಭೂದಾಖಲೆಗಳ ಸುಧಾರಣ ಕಾರ್ಯಕ್ರಮ (NLRMP). ಸಾರಿಗೆ ಸಂಪರ್ಕ ಮತ್ತು ರಾಷ್ಟ್ರೀಯ ನೋಂದಣಿ, ಖಜಾನೆಗಳ ಗಣಕೀಕರಣ, ಇ-ನ್ಯಾಯಾಲಯ, ಜೀವವಿಮೆ, ಇಷ್ಟೆಅಲ್ಲದೆ ರಾಜ್ಯ ಸರ್ಕಾರಗಳ ಹಲವಾರು ಇ-ಸೇವೆಗಳ (ತಂತ್ರಜ್ಞಾನಾಧರಿತ) ಯೋಜನೆಗಳಿಗೂ ರಾಷ್ಟ್ರೀಯ ಇನ್‌ಫಾರ್ಮ್ಯಾಟಿಕ್ಸ್ ಸಂಸ್ಥೆಯು ರೂಪ-ರೇಷಗಳನ್ನು ಸಿದ್ಧಪಡಿಸಿದ್ದು ಅವುಗಳ ಯಶಸ್ವೀ ಕಾರ್ಯಾಚಾರಣೆಗೂ ಕಾರಣವಾಗಿದೆ.

೧೯೯೦ ವೇಳೆಗೆ ಸರ್ಕಾರೀ ಇಲಾಖೆಗಳು/ಕಛೇರಿಗಳು ಗಣಕೀಕರಣ ವಾಗುವುದರೊಂದಿಗೆ ಇ-ಆಳ್ವಿಕೆಯ ಪರಿಕಲ್ಪನೆಯು ಹೆಚ್ಚು ಪ್ರವರ್ಧಮಾನಕ್ಕೆ ಬಂದಿತು. ೨೦೦೦ದ ಮಾಹಿತಿ ತಂತ್ರಜ್ಞಾನ ಕಾಯ್ದೆ ಯು ಸರ್ಕಾರದ ಇ-ಸೇವೆಗೆ



ಅಥವಾ ತಂತ್ರಜ್ಞಾನ ಉಪಕರಣಗಳ ಮೂಲಕ ನಡೆಸುವ ಯಾವುದೇ ವ್ಯವಹಾರಗಳಿಗೆ ಕಾನೂನಿನ ಮಾನ್ಯತೆಯನ್ನು ನೀಡಿತು. ೨೦೦೩ರಲ್ಲಿ ಮಾಹಿತಿ ತಂತ್ರಜ್ಞಾನ ಇಲಾಖೆಯಿಂದ ಪ್ರತ್ಯೇಕವಾದ ಇ-ಗವರ್ನೆನ್ಸ್ (ಇ-ಆಳ್ವಿಕೆ) ಸಚಿವಶಾಖೆಯನ್ನು ಪ್ರಾರಂಬಿಸಲಾಯಿತು. ಇದರ ಮುಖ್ಯ ಉದ್ದೇಶ ಆಡಳಿತ ವ್ಯವಹಾರಗಳ ಶೀಘ್ರ ನಿರ್ವಹಣೆ, ಆಡಳಿತಾಂಗದ ಸುಧಾರಣೆ ಮತ್ತು ಪಾರದರ್ಶಿಕ ಆಡಳಿತ ವ್ಯವಸ್ಥೆಯನ್ನು ಜಾರಿಗೊಳಿಸುವುದಾಗಿದೆ. ೨೦೦೬ರಲ್ಲಿ ಭಾರತ ಸರ್ಕಾರವು ಜಾರಿಗೊಳಿಸಿದ 'ರಾಷ್ಟ್ರೀಯ ಇ-ಆಳ್ವಿಕೆ ಯೋಜನೆ (National E-Governance plan(N.E.G.P) ಯಡಿಯಲ್ಲಿ ಕೇಂದ್ರ, ರಾಜ್ಯ ಹಾಗೂ ಸ್ಥಳೀಯ ಹಂತಗಳಲ್ಲಿ ಇ-ಆಳ್ವಿಕೆ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಹಲವು ಯೋಜನೆಗಳನ್ನು ಜಾರಿಗೆ ತರಲಾಗಿದೆ. ಕೇಂದ್ರ ಮಟ್ಟದಲ್ಲಿ ಆದಾಯ ತೆರಿಗೆ, ಪಾಸ್‌ಪೋರ್ಟ್ ಮತ್ತು ವಲಸೆ, ವಿಮೆ, ಕೇಂದ್ರ ಅಬಕಾರಿ, ಪಿಂಚಣಿಯೋಜನೆ, ಬ್ಯಾಂಕಿಂಗ್, ಇ-ಕಛೇರಿ ಹಾಗೆಯೇ ರಾಜ್ಯ ಮಟ್ಟದಲ್ಲಿ ಭೂದಾಖಲೆಗಳು, ರಸ್ತೆ, ಸಾರಿಗೆ, ಆಸ್ತಿನೋಂದಣಿ, ಖಜಾನೆ, ಮುನ್ಸಿಪಾಲಿಟಿ, ಗ್ರಾಮಪಂಚಾಯಿತಿ, ವಾಣಿಜ್ಯ ತೆರಿಗೆ, ಪೋಲೀಸ್, ಉದ್ಯೋಗ ವಿನಿಮಯ, ಇ-ಜಿಲ್ಲಾ ಯೋಜನೆಗಳನ್ನು ಜಾರಿಗೊಳಿಸಲಾಗಿದೆ. ಇಂದು ಸರ್ಕಾರಿ ಕಛೇರಿಗಳು ಕಾಗದ ಮುಕ್ತವಾಗುತ್ತಿದ್ದು ನಾಗರೀಕರಿಗೆ ಶೀಘ್ರ ಸೇವೆಯ ಭರವಸೆ ನೀಡುತ್ತಿವೆ. ಅಷ್ಟೇ ಅಲ್ಲದೆ ಜನಸಾಮಾನ್ಯನನ್ನು ಒಬ್ಬ ಗ್ರಾಹಕನೋಪಾದಿಯಲ್ಲಿ ಪರಿಗಣಿಸಿ ಉತ್ತಮ ಗುಣಮಟ್ಟದ ಮತ್ತು ಶೀಘ್ರವಾದ ಸೇವೆಯನು ಆತನಿಗೆ ಖಾತ್ರಿ ಪಡಿಸುತ್ತಿವೆ.

**"ಇ-ಆಳ್ವಿಕೆಯ ಪ್ರಮುಖ ಯೋಜನೆಗಳು"**

೧) **ಭೂಮಿ ಯೋಜನೆ:** ಇದು ಕರ್ನಾಟಕ ಸರ್ಕಾರದ ಕಂದಾಯ ಇಲಾಖೆಯ ಯೋಜನೆಯಾಗಿದೆ. ಈ ಯೋಜನೆಯಲ್ಲಿ ರೈತರಿಗೆ ಸಂಬಂಧಿಸಿದ ಭೂ ದಾಖಲೆಗಳನ್ನು ಗಣಕೀರಣಗೊಳಿಸಲಾಗಿದೆ. ಇದರ ಮೂಲಕ ರೈತರು ತಮಗೆ ಸಂಬಂಧಿಸಿದ ದಾಖಲೆಗಳನ್ನು ಸರಳವಾಗಿ ಮತ್ತು ಶೀಘ್ರವಾಗಿ ಪಡೆಯ ಬಹುದಾಗಿದೆ. ಇಲ್ಲಿ ವಿಳಂಬತೆಗೆ ಅವಕಾಶವಿಲ್ಲ ಮತ್ತು ದಾಖಲೆಗಳು ಸುರಕ್ಷಿತವಾಗಿರುತ್ತವೆ. ಕರ್ನಾಟಕದ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲೂ ಈ ಯೋಜನೆಯು ಜಾರಿಯಲ್ಲಿದ್ದು ಸುಮಾರ ೭೦ ಲಕ್ಷ ರೈತರು ಇದರ ಪ್ರಯೋಜನ ಪಡೆಯುತ್ತಿದ್ದಾರೆ. ಸುಮಾರು ೨ ಕೋಟಿಗೂ ಅಧಿಕ ಭೂದಾಖಲೆಗಳನ್ನು ಗಣಕೀಕರಣ ಮಾಡಲಾಗಿದೆ. 'ಭೂಮಿ' ಯೋಜನೆಯು ನ್ಯಾಷನೆಲ್ಲಾ ಇನ್‌ಫಾರ್ಮಾಟಿಕ್ ಟೆಕ್ನಾಲಾಜಿಯ ಸಹಯೋಗದೊಂದಿಗೆ ಜಾರಿಗೆಬಂದಿದೆ.



Scanned with CamScanner

ಸೇವೆಗಳನ್ನು ಒದಗಿಸುತ್ತಿದೆ.

**೩) ಲೋಕ ಮಿತ್ರಾ ಯೋಜನೆ:** ಇದು ರಾಜಸ್ಥಾನ ಸರ್ಕಾರದ ಯೋಜನೆಯಾಗಿದ್ದು, ಜನಸ್ನೇಹಿ ಯೋಜನೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಇದರ ಮೂಲಕ ಸರ್ಕಾರದ ಪ್ರತಿಯೊಂದು ಇಲಾಖೆಗಳಿಗೆ ಸಂಬಂಧಿಸಿದ ಮಾಹಿತಿ ಮತ್ತು ಸೌಕರ್ಯಗಳನ್ನು ನೀಡಲಾಗುತ್ತದೆ. ಇದು ಏಕಗವಾಕ್ಷಿ ಯೋಜನೆಯಾಗಿದ್ದು ಸರ್ಕಾರದ ಪ್ರತಿಯೊಂದು ಯೋಜನೆಗಳನ್ನು ಸಮಗ್ರೀಕರಣಗೊಳಿಸಲಾಗಿದೆ.

**೪) ಹಿಮಾಚಲ ಪ್ರದೇಶ ನೋಂದಣಿ-ಮಾಹಿತಿ ವ್ಯವಸ್ಥೆ:** ಇದು ಭೂ ದಾಖಲೆಗಳ ಸಂಪೂರ್ಣ ಗಣಕೀರಣಕ್ಕೆ ಸಂಬಂಧಿಸಿದೆ. ಇದು ಜನತೆಗೆ ದಕ್ಷವಾದ ಹಾಗೂ ಪಾರದರ್ಶಕವಾದ ಸೇವೆಯನ್ನು ಖಾತ್ರಿಪಡಿಸುತ್ತದೆ. ಕಂದಾಯದಲ್ಲಿನ ಸೋರಿಕೆ ತಡೆಗಟ್ಟಿ, ಸುಧಾರಿತ ನೋಂದಣಿ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸಲಾಗಿದೆ. ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಇದರ ಸೌಲಭ್ಯಗಳನ್ನು ವಿಸ್ತರಿಸಲಾಗಿದೆ. ನೋಂದಣಿಗೆ ತಗಲುವ ವೆಚ್ಚ ಮತ್ತು ಸಮಯವನ್ನು ಬಹುಪಾಲು ಕಡಿತ ಗೊಳಿಸಿದೆ.

**೫) ಇ-ಸಂಪರ್ಕ ಯೋಜನೆಚಂಡಿಘಡ:** ಇ-ಸಂಪರ್ಕದ ಮುಖ್ಯ ಉದ್ದೇಶ ಅನೇಕ ಸೇವೆಗಳು ಒಂದೇ ಸೂರಿನಡಿ. ಅಂದರೆ ಸರ್ಕಾರದ ವೈವಿದ್ಯಮಯ ಸೇವೆಗಳನ್ನು ಸಮಗ್ರೀಕರಣಗೊಳಿಸಿ ಏಕಗವಾಕ್ಷಿ ಪದ್ಧತಿಯ ಮೂಲಕ ಒಂದೇ ಸೂರಿನಡಿಯಲ್ಲಿ ಸಾರ್ವಜನಿಕರಿಗೆ ಒದಗಿಸುವುದಾಗಿದೆ. ಸೇವೆಗಳ ನಿರ್ವಹಣೆಯಲ್ಲಿ ಪಾರದರ್ಶಕತೆಯನ್ನು ಕಾಯ್ದುಕೊಳ್ಳುವುದು ಇದರ ಮುಖ್ಯ ಉದ್ದೇಶವಾಗಿದೆ.

**೬) ಲೋಕವಾಣಿ:** ೨೦೦೪ರಲ್ಲಿ ಉತ್ತರ ಪ್ರದೇಶದಲ್ಲಿಪ್ರಾರಂಭವಾದ ಲೋಕವಾಣಿಯು ನಗರ ಹಾಗೂ ಗ್ರಾಮೀಣ ಭಾಗದ ಕುಂದುಕೊರತೆಗಳ ನಿವಾರಣೆಯಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದೆ. ಅಂತರ್ಜಾಲದ ಮೂಲಕ



ಗಣಕೀಕೃತಗೊಂಡಿದ್ದು ಇ-ಆಳ್ವಿಕೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಶ್ರಮಿಸುತ್ತಿವೆ. ಜೊತೆಗೆ ಜನತೆಯನ್ನು ತಮ್ಮ ಕಾರ್ಯಗಳಲ್ಲಿ ಭಾಗೀದಾರರನ್ನಾಗಿಸುತ್ತಿವೆ.

**ಡಿಜಿಟಲ್ ಇಂಡಿಯಾ ಪರಿಕಲ್ಪನೆ:**

ಕೇಂದ್ರ ಸರ್ಕಾರವು ಜುಲೈ ೧ ೨೦೧೫ರಂದು ಡಿಜಿಟಲ್ಲ್ ಇಂಡಿಯಾ ಪರಿಕಲ್ಪನೆಗೆ ಚಾಲನೆ ನೀಡಲಾಗಿದೆ. ೨.೫ ಲಕ್ಷ ಹಳ್ಳಿಗಳಿಗೆ ಉಚಿತ ಬ್ರಾಡ್‌ಬ್ಯಾಂಡ್ ಸೌಲಭ್ಯ, ದೂರವಾಣಿ ಸಂಪರ್ಕ ನೀಡುವುದು. ೨.೫ ಲಕ್ಷ ಶಾಲೆಗಳು ಹಾಗೂ ವಿಶ್ವವಿದ್ಯಾನಿಲಯಗಳಿಗೆ ವೈ-ಫೈ-ಸೌಲಭ್ಯ, ಸಾರ್ವಜನಿಕ ವೈ-ಫೈ ಸೌಲಭ್ಯ, ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ೧.೭ ಕೋಟಿ ಉದ್ಯೋಗ ಸೃಷ್ಟಿಗೆ ತರಬೇತಿ, ಸರಕಾರದ ಆಡಳಿತದಲ್ಲಿ ಇ-ಆಡಳಿತ ಮತ್ತು ಇ-ಸೇವಾ ಪರಿಕಲ್ಪನೆಗಳ ಪರಿಣಾಮಕಾರಿ ಅನುಷ್ಠಾನ, ವಿದ್ಯುನ್ಮಾನ ಸಾಧನಗಳ ಮೂಲಕ ಸೇವೆಯ ವಿತರಣೆ(ಇ-ಕ್ರಾಂತಿ) ಮುಂತಾದವುಗಳು ಖಾಸಗೀ ಸಹಭಾಗಿತ್ವದೊಂದಿಗೆ ಕೇಂದ್ರ ಸರ್ಕಾರವು ಕೈಗೊಂಡಿರುವ 'ಡಿಜಿಟಲ್ ಇಂಡಿಯಾ' ದಪ್ರಮುಖ ಉದ್ದೇಶವಾಗಿವೆ.

ಇಷ್ಟೆಲ್ಲಾ ಸಕರಾತ್ಮಕ ಬೆಳವಣಿಗೆಗಳ ನಡುವೆಯೂ ಭಾರತದಲ್ಲಿ ಇ-ಆಳ್ವಿಕೆಯನ್ನು ಪರಿಣಾಮಕಾರಿಯಾಗಿ ಜಾರೀಗೊಳಿಸಲು ಅಥವಾ ನಿರ್ವಹಿಸಲು ಅನೇಕ ಸವಾಲುಗಳಿವೆ. ಅವುಗಳೆಂದರೆ, ಮಿತಿಮೀರಿದ ಜನಸಂಖ್ಯೆ, ಅನಕ್ಷರತೆ ಅಥವಾ ತಾಂತ್ರಿಕಜ್ಞಾನದ ಅಭಾವ, ನೇತಾರರ ಅಥವಾ ಅಧಿಕಾರಿಗಳ ಇಚ್ಛಾಶಕ್ತಿಯ ಕೊರತೆ, ಸಂಪನ್ಮೂಲಗಳ ಅಸಮರ್ಪಕ ಬಳಕೆ, ಇ-ಯೋಜನೆಗಳ ಅನುಷ್ಠಾನಗಳಲ್ಲಿ ನಡೆಯಬಹುದಾದ ಭ್ರಷ್ಟಾಚಾರ, ಮುಂತಾದವುಗಳು.

❖



Scanned with CamScanner